ಆ) ಪರಿಶೀಲನೆಯಲ್ಲಿದೆ

ಇ) ಅನುಮೋದನೆ ನೀಡಿದ ನಂತಹ ಆಯವ್ಯಯದಲ್ಲಿ ಅಳವಡಿಸಲಾಗುವುದು.

ಶ್ರೀ ಗುಂಡಪ್ಪ ವಕೀಲ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಔರಾದ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ನಾವು ಮಾಡಿರತಕ್ಕಂತಹ ಪಾಪ ಆದರೂ ಏನು ನಮ್ಮ ಕರ್ಮ ಏನು ಅದರ ಬಗ್ಗೆ ಆ ಸಚಿವರು ಹೇಳಬೇಕು. ಎಂಡನೇ ಮಾತು ಔರಾದ್ ನಗರದಿಂದ ಆರು ಕಿ.ಮೀ. ಮೇಲೆ ಸಣ್ಣ ನೀರಾವರಿ ಕೆರೆ ಇದೆ. ಬೇಕಾದಷ್ಟು ನೀರು ಇಲ್ಲಿದೆ. ಅಲ್ಲಿ ಬಾವಿ ತೋಡಿಸಿ ಔರಾದ್ ನಗರಕ್ಕೆ ನೀರು ಸರಬರಾಜು ಮಾಡಿಕೊಡಿ ಎಂದು ನಾವು 25 ವರ್ಷಗಳಿಂದ ಕೇಳುತ್ತಿದ್ದೇವೆ. ಕುಡಿಯುವದಕ್ಕೆ ನೀರು ಕೊಡಿ ಎಂದರೆ ನೀವು ಏಕೆ ಕೊಡುತ್ತಿಲ್ಲ? ಕೊಡುತ್ತೀರಾ ಅಥವ ಇಲ್ಲವೆ ಇದಗ ಬಗ್ಗೆ ನಿಖರವಾದ ಉತ್ತರ ಕೊಡಿ.

ಶ್ರೀ ಬಿ.ಜಿ. ಚಿಮ್ಮನಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಅದು ಹಿಂದೆ ಆದ ಪಾಪ ಪುಣ್ಯದ ಬಗ್ಗೆ, ಚರ್ಚೆ ಮಾಡುವ ಅವಶ್ಯಕತೆ ಇಲ್ಲ, ಅದು ಏಕೆ ಆಗಲಿಲ್ಲವೆಂದು ನಾವು ಪರಾಮರ್ಶಿಸುವುದು ಬೇಕಾಗಿಲ್ಲ. ಇಡೀ ಬೀದರ್ ಜಿಲ್ಲೆಯಲ್ಲಿ ಔರಾದ್ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರಕ್ಕೆ ಕೂಡ ಮನವರಿಕೆಯಾಗಿದೆ. ಸುಮಾರು 1974ರಲ್ಲಿ ಒಂದು ಸಣ್ಣ ಕುಡಿಯುವ ನೀರಿನ ಯೋಜನೆ ಮಾಡಿದ್ದರು. ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರನ್ನು ಕೊಡಬೇಕೆಂದು ಮಾಡಿದ್ದರು. ಆ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೂ ಕೂಡ ಕಳುಹಿಸಿಕೊಟ್ಟಿದ್ದರು. ಅದು ಓಪನ್ ವೆಲ್ ಸ್ಕೀಂ ಇರುವುದರಿಂದ ಕೇಂದ್ರ ಸರ್ಕಾರದವರು ಡಬ್ಲ್ಯು.ಎಸ್. ಪ್ರೋಗ್ರಾಂನಲ್ಲಿ ಇದನ್ನು ರೆಫ್ಯೂಸ್ ಮಾಡಿದ್ದಾರೆ. ಆದರೆ ನಾವು ಈಗ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ, ಈ ಯೋಜನೆಗೆ 2.66 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇದು 13,000 ಜನಸಂಖ್ಯೆ ಇರುವ ಸಣ್ಣ ಪಟ್ಟಣ. ಅದಕ್ಕೆ ಕೂಡ ಮುಂದಿನ ವರ್ಷ ಬಜೆಟ್‌ನಲ್ಲಿ ಯೋಜನೆ ಹಾಕಿಕೊಂಡು ಮಾಡುತ್ತೇವೆ. ಇದು ಬಹಳ ಅವಶ್ಯವೆಂದು ಸರ್ಕಾರಕ್ಕೆ ಮತ್ತು ನನಗೆ ಕೂಡ ಮನವರಿಕೆಯಾಗಿದೆ. ಯಾವುದೇ ರಿಸೋರ್ಸ್‌ಸ್ ಇಲ್ಲದ ಪಟ್ಟಣ, ಇದು. ಈ ಪಟ್ಟಣಕ್ಕೆ ಹೆಚ್ಚು ಆದ್ಯತೆ ಕೊಡಬೇಕೆಂದು ನನಗೆ ಮನವರಿಕೆಯಾಗಿದೆ. ಮುಂದಿನ ವರ್ಷದೊಳಗೆ ಇದಕ್ಕೆ ಆದ್ಯತೆ ನೀಡಿ ಈ ಯೋಜನೆಗೆ ಮಂಜೂರಾತಿಯನ್ನು ಕೊಟ್ಟು ಮುಗಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

<u>ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 8ನೇ ಮಾರ್ಚ್ 2001ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಎಳನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 75 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.